9. **ಮನೆಯ ಮುಖ್ಯ ಲಕ್ಷಣಗಳು:**

- Column Structure (G+2)
- Walls are with Solid Cement Blocks
- R.C.C Door Frame with Flush Shutter
- Fully Glazed Box Type Steel Window
- Flooring with Semi Vitrified Tiles
- Glazed Tiles for Bathroom & Toilet
- Black Granite slab for Kitchen platform & black Granite Sink
- Water Supply & Sanitation to Building
- Electrification to Building

10. **ಅನುದಾನ ಲಭ್ಯತೆ:**

ಸಂಪೂರ್ಣ ಮೊತ್ತವನ್ನು ಫಲಾನುಭವಿಯ ವಂತಿಕೆ ಮತ್ತು ಬ್ಯಾಂಕ್ ಸಾಲದ ಮೂಲಕ ಭರಿಸಬೇಕಾಗುವುದು.

11. **ಬ್ಯಾಂಕುಗಳಿಂದ ಸಾಲ ಪಡೆಯುವ ವಿಧಾನ:**

ಆಯ್ಕೆಯಾದ ಅರ್ಜಿದಾರರಿಂದ ಅವಶ್ಯ ದಾಖಲೆಗಳನ್ನು ಪಡೆದು ಬ್ಯಾಂಕಿಗೆ ರವಾನಿಸಿ ಅರ್ಜಿದಾರರ ಹೆಸರಿಗೆ ಮಂಜೂರಾದ ಅನುದಾನವನ್ನು ಪಡೆದು ಮನೆಗಳನ್ನು ನಿರ್ಮಿಸಿ ಅರ್ಜಿದಾರರಿಗೆ ಮನೆಯನ್ನು ಮಾತ್ರ ಹಸ್ತಾಂತರಿಸಿ ಉಳಿದ ದಾಖಲೆಗಳನ್ನು ಬ್ಯಾಂಕಿಗೆ ನೀಡಲಾಗುವುದು. ತದನಂತರ ಅರ್ಜಿದಾರರು ಮನೆಯನ್ನು ಸ್ವಾಧೀನಕ್ಕೆ ಪಡೆದುಕೊಂಡು ಆ ಮನೆಗೆ ಪಡೆದ ಸಾಲವನ್ನು ಬ್ಯಾಂಕಿಗೆ ನೇರವಾಗಿ ಮರುಪಾವತಿ ಮಾಡಲು ವ್ಯವಸ್ಥೆ ಮಾಡಲಾಗುವುದು.

12. **ಮನೆಗಳ ನಿರ್ಮಾಣ:**

ರಾಜೀವ ಗಾಂಧಿ ಗ್ರಾಮೀಣ ವಸತಿ ನಿಗಮವು ನಿರ್ಮಾಣ ಸಂಸ್ಥೆಗಳಾದ ನಿರ್ಮಿತಿ ಕೇಂದ್ರ ಅಥವಾ ಕರ್ನಾಟಕ ಹ್ಯಾಬಿಟೇಟ್ ಸೆಂಟರ್‌ನ ಅಥವಾ ಕರ್ನಾಟಕ ಭೂ ಸೇನಾ ನಿಗಮ ಅಥವಾ ಹೊರಗುತ್ತಿಗೆಯನ್ನು ಟೆಂಡರ್ ಮೂಲಕ ನೀಡಿ ಮನೆಗಳನ್ನು ನಿರ್ಮಿಸಲಾಗುವುದು.

13. **ನಿಗಮದ ವೆಬ್‌ಸೈಟ್‌ನಲ್ಲಿ ಮಾಹಿತಿ**

ಈ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಎಲ್ಲಾ ಮಾರ್ಗಸೂಚಿಗಳು, ಮುಖ್ಯವಾದ ಪತ್ರಗಳು, ಸುತ್ತೋಲೆಗಳು ಮತ್ತು ನಮೂನೆಗಳು ಹಾಗೂ ಸಾರ್ವಜನಿಕರಿಗೆ ಬೇಕಾದ ಅಗತ್ಯ ಮಾಹಿತಿಗಳನ್ನು ನಿಗಮದ ವೆಬ್‌ಸೈಟ್: http://ashraya.kar.nic.in ನಲ್ಲಿ ನೀಡಲಾಗುವುದು

## ಭಾಗ್ಯ



**ಮನೆಯ ವಿಸ್ತೀರ್ಣ ಒಟ್ಟು 425 ಚದರ ಅಡಿ** –(Single Bed Room)

**ಅಂದಾಜು ವೆಚ್ಚ ರೂ.** 4,25,000

## ಸಂಪದ



**ಮನೆಯ ವಿಸ್ತೀರ್ಣ ಒಟ್ಟು 505 ಚದರ ಅಡಿ**

(Single Bed Room, Study Room)

**ಅಂದಾಜು ವೆಚ್ಚ ರೂ.** 5,25,000

## ಯಶಸ್ಸು



**ಮನೆಯ ವಿಸ್ತೀರ್ಣ ಒಟ್ಟು 576 ಚದರ ಅಡಿ** (Double Bed Room)

**ಅಂದಾಜು ವೆಚ್ಚ ರೂ.** 6,00,000

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ:**

2311 8888

ವಿಸ್ತರಣಾ ಸಂಖ್ಯೆ:

ಕಾರ್ಯಕ್ರಮ ಅನುಷ್ಠಾನ ವಿಭಾಗ–24 ರಿಂದ 31

ತಾಂತ್ರಿಕ ವಿಭಾಗ– 34 ರಿಂದ 36

ಹಣಕಾಸು ವಿಭಾಗ–37 ರಿಂದ 40

ಆಡಳಿತ ವಿಭಾಗ–41 ರಿಂದ 43

ಕಂಪ್ಯೂಟರ್ ವಿಭಾಗ–45 ರಿಂದ 47

ಈ ಮೇಲ್: rgrhcl@rediffmail.com

# ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ

ಪ್ಲಾಟ್ ನಂ. 1–4, 1ನೇ ಮಹಡಿ, ಐ.ಟಿ. ಪಾರ್ಕ್, ರಾಜಾಜಿನಗರ ಕೈಗಾರಿಕಾ ಪ್ರದೇಶ

ರಾಜಾಜಿನಗರ, ಬೆಂಗಳೂರು–560 044

## ನನ್ನ ಮನೆ (ಭಾಗ್ಯ, ಸಂಪದ, ಯಶಸ್ಸು) ಯೋಜನೆ

Affordable Housing Scheme







# ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ

ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದವರಿಗೆ ವಸತಿ ಸೌಲಭ್ಯವನ್ನು ಕಲ್ಪಿಸುವುದಕ್ಕಾಗಿ ಸರ್ಕಾರವು ಎಪ್ರಿಲ್ 20, 2000ದಲ್ಲಿ ಈ ನಿಗಮವನ್ನು ಸ್ಥಾಪಿಸಿದ್ದು, ಅಂದಿನಿಂದ ಇಂದಿನವರೆಗೆ ವಸತಿ ಕ್ಷೇತ್ರದಲ್ಲಿ ಬದಲಾವಣೆಯನ್ನು ಉಂಟು ಮಾಡುವ ಮೂಲಕ ಲಕ್ಷಾಂತರ ಕೆಳವರ್ಗದ ಫಲಾನುಭವಿಗಳಿಗೆ ಶಾಶ್ವತ ನೆಲೆಯನ್ನು ಕಲ್ಪಿಸಿದಲ್ಲದೇ, ಜನರ ಜೀವನ ಮಟ್ಟವನ್ನು ಉತ್ತಮಗೊಳಿಸಿ ಇಡೀ ಕರ್ನಾಟಕ ರಾಜ್ಯವನ್ನು ಗುಡಿಸಲು ಮುಕ್ತ ರಾಜ್ಯವನ್ನಾಗಿ ಮಾಡುವ ದಿಶೆಯಲ್ಲಿ ಸಾಗುತ್ತಿದೆ.

## ಧ್ಯೇಯೋದ್ದೇಶಗಳು:

- ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದಿರುವವರಿಗೆ ವಸತಿ ಸೌಲಭ್ಯ ಒದಗಿಸಿ ಶಾಶ್ವತ ನೆಲೆಯನ್ನು ಕಲ್ಪಿಸಿಕೊಡುವುದು.
- ಗ್ರಾಮ ಪಂಚಾಯಿತಿಗಳಿಂದ ಪ್ರಾಯೋಜಿತವಾದ ವಸತಿ ಯೋಜನೆಗಳನ್ನು ಬೆಂಬಲಿಸಿ, ಗ್ರಾಮ ಪಂಚಾಯಿತಿಗಳ ಸಾಮರ್ಥ್ಯವನ್ನು ಹೆಚ್ಚಿಸುವುದು.
- ಮಹಿಳೆಯ ಹೆಸರಿನಲ್ಲಿ ಹಕ್ಕು ಪತ್ರವನ್ನು ನೀಡುವುದು.
- ಫಲಾನುಭವಿಗಳಿಗೆ ಉಳಿತಾಯದ ಅಭ್ಯಾಸವನ್ನು ರೂಢಿಸಿ ಆ ಮೂಲಕ ಸಾಲಗಳು ಮರುಪಾವತಿಯಾಗುವಂತೆ ನೋಡಿಕೊಂಡು, ವಸತಿ ಕಾರ್ಯಕ್ರಮಗಳು ಸತತವಾಗಿ ತಡೆಯಿಲ್ಲದೆ ಮುಂದುವರಿಯುವಂತೆ ಮಾಡುವುದು.
- ವಸತಿ ವಿನ್ಯಾಸ, ಕಟ್ಟಡ ಸಲಕರಣೆ ಸಾಮಾಗ್ರಿ ಮತ್ತು ತಾಂತ್ರಿಕತೆಯಲ್ಲಿ ಸ್ವಂತವಾಗಿ ಆಯ್ಕೆ ಮಾಡಲು ಜನರಿಗೆ ಅವಕಾಶ ನೀಡುವುದು.
- ಆರ್ಥಿಕವಾಗಿ ಹಿಂದುಳಿದ ವರ್ಗದವರಿಗೆ ಅಂದರೆ ಅಂಗವಿಕಲರಿಗೆ, ಮನೆ ಕೆಲಸ ಮಾಡುವವರಿಗೆ, ಬೀದಿ ಬದಿ ತರಕಾರಿ ಮಾರುವವರಿಗೆ, ಬೀಡಿ ಕಾರ್ಮಿಕರಿಗೆ, ಅಲೆಮಾರಿ ಜನಾಂಗದವರಿಗೆ, ದೇವದಾಸಿಯರಿಗೆ, ಪ್ರವಾಹ ಪೀಡಿತರಿಗೆ, ಜೀತಮುಕ್ತರಾದವರಿಗೆ, ಪೌರಕಾರ್ಮಿಕರಿಗೆ, ಹಮಾಲರಿಗೆ, ನೇಕಾರರಿಗೆ, ಗಣಿ ಕಾರ್ಮಿಕರಿಗೆ, ಕುಶಲ ಕರ್ಮಿಗಳಿಗೆ, ಮುಂತಾದ ವಿಶೇಷ ಉದ್ಯೋಗ ವೃಂದದವರಿಗೆ ಅವರ ಕೈಗೆಟುಕುವಂತಹ ವಸತಿ ಸೌಲಭ್ಯವನ್ನು ಕರ್ನಾಟಕದಾದ್ಯಂತ ಕಲ್ಪಿಸುವುದು.
- ಆಡಳಿತ ವ್ಯವಸ್ಥೆಯಲ್ಲಿ ದಕ್ಷತೆ ಮತ್ತು ಪಾರದರ್ಶಕತೆಯನ್ನು ತರುವುದು.

# ನನ್ನ ಮನೆ ಯೋಜನೆ

## Affordable Housing Scheme

ಬೆಂಗಳೂರು ಮಹಾ ನಗರ ವ್ಯಾಪ್ತಿಯಲ್ಲಿ ಲಕ್ಷಾಂತರ ಮಂದಿಯು ಅತೀ ಕಡಿಮೆ ಆದಾಯ ಹೊಂದಿರುವುದರ ಜೊತೆಗೆ ಶಾಶ್ವತವಾದ ನೆಲೆಯಿಲ್ಲದೇ ತಾತ್ಕಾಲಿಕವಾಗಿ ಬಾಡಿಗೆ ಮನೆಗಳಲ್ಲಿ ಹಾಗೂ ನಿಖರವಾದ ಮೂಲಭೂತ ಸೌಕರ್ಯಗಳಿಲ್ಲದ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ಇಂತಹ ವಸತಿರಹಿತ ಹಾಗೂ ನಿವೇಶನ ರಹಿತರು ಬೆಂಗಳೂರಿನಲ್ಲಿ ಶಾಶ್ವತ ನೆಲೆ ಹೊಂದಲು ಸಾಧ್ಯವಾಗುತ್ತಿಲ್ಲ. ಇದಕ್ಕೆ ಪ್ರಮುಖ ಕಾರಣ ಇತ್ತೀಚಿನ ವರ್ಷಗಳಲ್ಲಿ ಖಾಲಿ ನಿವೇಶನಗಳ, ನಿರ್ಮಿಸಿದ ಮನೆಗಳ ಹಾಗೂ ಅಪಾರ್ಟ್‌ಮೆಂಟ್‌ಗಳ ಬೆಲೆಯು ದುಬಾರಿಯಾಗಿದ್ದು ಕೈಗೆಟುಕುವ ದರಗಳಲ್ಲಿ ಕೆಳವರ್ಗದವರಿಗೆ ದೊರೆಯುತ್ತಿಲ್ಲ.

ಇಷ್ಟೊಂದು ದೊಡ್ಡ ಮೊತ್ತವನ್ನು ವಿನಿಯೋಗಿಸಲು ಸಾಧ್ಯವಾಗದೇ ಕಡಿಮೆ ಆದಾಯ ಹೊಂದಿರುವ ಬೀಡಿ ಕಾರ್ಮಿಕರು, ಆಟೋ ಚಾಲಕರು, ಚಲನಚಿತ್ರ ತಾಂತ್ರಿಕಗಾರರು, ಗಾರ್ಮೆಂಟ್ ಕೆಲಸಗಾರರು, ತರಕಾರಿ ಮಾರುವವರು, ಅಗರಬತ್ತಿ ಕೆಲಸಗಾರರು, ಸಣ್ಣ ಗುತ್ತಿಗೆದಾರರು (Petty Contractors) 'ಡಿ' ಗ್ರುಫ್ ನೌಕರರು, ಐಟಿ/ಐಟಿಸಿ ಕಂಪನಿಗಳಲ್ಲಿ ಕೆಲಸ ಮಾಡುತ್ತಿರುವವರು ಹಾಗೂ ಇತರೆ ರೂ 1,00,000/–ವರಗೆ ವಾರ್ಷಿಕ ಆದಾಯ ಹೊಂದಿದ ಬೃಹತ್ ಬೆಂಗಳೂರು ಮತ್ತು ಇತರೆ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ನಿವೇಶನರಹಿತ ಮತ್ತು ವಸತಿರಹಿತರಿಗೆ ಶಾಶ್ವತವಾದ ನೆಲೆಯನ್ನು ನೀಡಲು ಸರ್ಕಾರವು ಮೊಟ್ಟ ಮೊದಲನೆಯ ಬಾರಿಗೆ ಕೈಗೆಟುಕುವ ದರದಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳೊಂದಿಗೆ "ನನ್ನ ಮನೆ" ಎಂಬ ನೂತನ ಯೋಜನೆಯ ಮೂಲಕ ವಸತಿ ಸೌಕರ್ಯವನ್ನು ಕಲ್ಪಿಸಲು ಚಿಂತಿಸಲಾಗಿದೆ.

ಈ ಹೊಸ ಯೋಜನೆಯನ್ನು ಅತ್ಯಂತ ಪರಿಣಾಮಕಾರಿಯಾಗಿ ಹಾಗೂ ಪಾರದರ್ಶಕತೆಯಿಂದ ಅನುಷ್ಠಾನಗೊಳಿಸಲು ಮಾರ್ಗಸೂಚಿಗಳನ್ನು ರೂಪಿಸಲಾಗಿದ್ದು ಅನುಷ್ಠಾನಕ್ಕೆ ಸಂಬಂಧಿಸಿದಂತೆ ಪಾಲಿಸಬೇಕಾದ ನಿಯಮಗಳನ್ನು ಈ ಕೆಳಗೆ ವಿವರಿಸಲಾಗಿದೆ.

### 1. ಅರ್ಹತೆ:

"ನನ್ನ ಮನೆ" ಯೋಜನೆಯಡಿ ಬೆಂಗಳೂರಿನಲ್ಲಿ ಸ್ವಂತ ಮನೆ ಹೊಂದುವ ಸಲುವಾಗಿ ನಿಗಮಕ್ಕೆ ಅರ್ಜಿ ಸಲ್ಲಿಸ ಬಯಸುವವರು ಈ ಕೆಳಗಿನ ಅರ್ಹತೆಗಳನ್ನು ಹೊಂದಿರಬೇಕಾಗುತ್ತದೆ.

- ಸಂಬಂಧಪಟ್ಟ ನಗರ ಪ್ರದೇಶದಲ್ಲಿ ಕನಿಷ್ಠ 10 ವರ್ಷಗಳಿಂದ ವಾಸಿಸುತ್ತಿರಬೇಕು
- ಅರ್ಜಿ ಸಲ್ಲಿಸಲು ಬಯಸುವವರು ತನ್ನ ಹಾಗೂ ಕುಟುಂಬದ ಹೆಸರಿನಲ್ಲಿ ಯಾವುದೇ ನಿವೇಶನ ಅಥವಾ ಮನೆಯನ್ನು ಹೊಂದಿರಬಾರದು.
- ಸಂಪೂರ್ಣವಾಗಿ ನಿವೇಶನ ರಹಿತ ಹಾಗೂ ವಸತಿ ರಹಿತರಾಗಿದ್ದು, ವಾರ್ಷಿಕ ಆದಾಯ ರೂ 1,00,000/– ಒಳಗಿರಬೇಕು.

### 2. ಅರ್ಜಿಗಳ ಅಹ್ವಾನ:

"ನನ್ನ ಮನೆ" ಯೋಜನೆಯಡಿ ಮನೆಯನ್ನು ಪಡೆಯಲು ನಿಗದಿತ ಅರ್ಜಿಗಳನ್ನು ಬಹಿರಂಗ ಪತ್ರಿಕೆಗಳ ಮೂಲಕ ಆಹ್ವಾನಿಸಲಾಗುವುದು.

### 3. ಅರ್ಜಿಗಳನ್ನು ಪಡೆಯುವ ವಿಧಾನ:

ನಿಗಮವು ನಿಗದಿಪಡಿಸುವ ಅರ್ಜಿಗಳನ್ನು ಪತ್ರಿಕೆಗಳಲ್ಲಿ ತಿಳಿಸಲಾದ ಬ್ಯಾಂಕುಗಳಲ್ಲಿ ಹಾಗೂ ನಿಗಮದ ಕೇಂದ್ರ ಕಛೇರಿಯಲ್ಲಿ ನಿಗಮವು ನಿಗದಿಪಡಿಸುವ ಬ್ಯಾಂಕ್ ಖಾತೆ ಸಂಖ್ಯೆಗೆ ರೂ. 100/– ನ್ನು ಪಾವತಿಸಿದ ಚಲನ್‌ನ್ನು ನೀಡಿ ಅರ್ಜಿಗಳನ್ನು ಪಡೆಯಬಹುದು. ಈ ಅರ್ಜಿ ಶುಲ್ಕವನ್ನು ಯಾವುದೇ ಕಾರಣಕ್ಕೂ ಮರುಪಾವತಿ ಮಾಡಲಾಗುವುದಿಲ್ಲ.

### 4. ಅರ್ಜಿಗಳನ್ನು ಸಲ್ಲಿಸುವ ವಿಧಾನ:

ಎಲ್ಲಾ ಅಂಕಣಗಳನ್ನು ಪೂರ್ಣ ಪ್ರಮಾಣದಲ್ಲಿ ತುಂಬಿದ ಅರ್ಜಿಗಳನ್ನು ಮುಂಗಡ ಹಣದೊಂದಿಗೆ ಈ ಕೆಳಗೆ ತಿಳಿಸಿರುವ ದಾಖಲೆಗಳೊಂದಿಗೆ ಪತ್ರಿಕೆಗಳಲ್ಲಿ ತಿಳಿಸಲಾಗುವ ಸ್ಥಳಗಳಲ್ಲಿ ಸ್ವೀಕರಿಸಲಾಗುವುದು.

- ರೂ. 100000/– ಒಳಗಿನ ಆದಾಯ ಪ್ರಮಾಣ ಪತ್ರ (ಆಯಾ ವರ್ಷಕ್ಕೆ ಸಂಬಂಧಿಸಿದಂತೆ ತಹಶೀಲ್ದಾರ ಇವರಿಂದ ಪಡೆದಿರಬೇಕು).
- ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಕೋಟಾದಲ್ಲಿ ಅರ್ಜಿ ಸಲ್ಲಿಸಿದಲ್ಲಿ ಸಂಬಂಧಪಟ್ಟ ತಹಶೀಲ್ದಾರರಿಂದ ಪಡೆದ ಜಾತಿ ಪ್ರಮಾಣ ಪತ್ರ.
- ಅಂಗವಿಕಲ ಕೋಟಾದಡಿ ಅರ್ಜಿ ಸಲ್ಲಿಸಿದ್ದಲ್ಲಿ ಅಂಗವಿಕಲರ ಪ್ರಮಾಣ ಪತ್ರ.
- ಮಾಜಿ ಸೈನಿಕ ಕೋಟಾದಡಿ ಅರ್ಜಿ ಸಲ್ಲಿಸಿದ್ದಲ್ಲಿ ಮಾಜಿ ಸೈನಿಕರ ಗುರುತಿನ ಪ್ರಮಾಣ ಪತ್ರ.
- ಹಿರಿಯ ನಾಗರೀಕ ಕೋಟಾದಡಿ ಅರ್ಜಿ ಸಲ್ಲಿಸಿದ್ದಲ್ಲಿ ಹಿರಿಯ ನಾಗರೀಕರ ಗುರುತಿನ ಪ್ರಮಾಣ ಪತ್ರ.

### 5. ಮುಂಗಡ ಅನುದಾನ:

ಸ್ವಂತ ಮನೆಯನ್ನು ಪಡೆಯಲು ಅರ್ಜಿ ಸಲ್ಲಿಸುವ ಅರ್ಜಿದಾರರು ಪತ್ರಿಕೆಗಳಲ್ಲಿ ತಿಳಿಸುವ ಹೆಸರಿಗೆ ಡಿ.ಡಿ. ಪಡೆದು ಅರ್ಜಿ ಜೊತೆ ಸಲ್ಲಿಸುವುದು.

ಈ ಯೋಜನೆಯಡಿ ಆಯ್ಕೆಯಾಗದ ಅರ್ಜಿದಾರರಿಗೆ ಮುಂಗಡ ಹಣವನ್ನು ಯಾವುದೇ ಬಡ್ಡಿಯಿಲ್ಲದೇ ಒಂದೇ ಕಂತಿನಲ್ಲಿ ಹಿಂದಿರುಗಿಸಲಾಗುವುದು. ಅರ್ಜಿಯೊಂದಿಗೆ ಮುಂಗಡ ಹಣವನ್ನು ಲಗತ್ತಿಸಿಲ್ಲದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

### 6. ಮನೆಗಳ ಹಂಚಿಕೆ ಪ್ರಕ್ರಿಯೆ :

ಬಡಾವಣೆಯಲ್ಲಿ ನಿರ್ಮಿಸಿದ ಮನೆಗಳನ್ನು ಆಯಾಯ ವರ್ಗಗಳಿಗೆ ತಕ್ಕಂತೆ ಮೀಸಲಾತಿಯನ್ನು ಗಮನದಲ್ಲಿಟ್ಟುಕೊಂಡು ನಿಗಮವು ಸ್ವೀಕರಿಸಿದ ಒಟ್ಟು ಅರ್ಜಿಗಳನ್ನು ಒಂದೆಡೆ ಕಲೆ ಹಾಕಿ ಬಹಿರಂಗವಾಗಿ ಲಾಟರಿ ಮೂಲಕ ಆಯ್ಕೆ ಮಾಡಿ ಹಂಚಿಕೆ ಮಾಡಲಾಗುವುದು.

### 7. ಮೀಸಲಾತಿ:

ನಿರ್ಮಿಸಲಾಗುವ ಮನೆಗಳಿಗೆ ಮೀಸಲಾತಿಯು ಈ ಕೆಳಗಿನಂತೆ ಅನ್ವಯವಾಗುತ್ತದೆ.

- ಪರಿಶಿಷ್ಟ ಜಾತಿ ವರ್ಗದವರಿಗೆ ಶೇಕಡ 16.20, ಪರಿಶಿಷ್ಟ ಪಂಗಡದ ವರ್ಗದವರಿಗೆ 6.55.
- ಅಂಗವಿಕಲರಿಗೆ ಶೇಕಡ 5.
- ಮಾಜಿ ಸೈನಿಕರಿಗೆ ಅಥವಾ ಸೈನಿಕರ ವಿಧವೆಯವರಿಗೆ ಶೇಕಡ 1.
- ಹಿರಿಯ ನಾಗರಿಕರಿಗೆ ಶೇಕಡ 2.
- ಮೇಲೆ ತಿಳಿಸಿದ ವರ್ಗಗಳಲ್ಲಿ ಮೀಸಲಾತಿಗೆ ತಕ್ಕಂತೆ ಅರ್ಜಿಗಳು ಲಭ್ಯವಿಲ್ಲದಿದ್ದಲ್ಲಿ ಸದರಿ ಮನೆಗಳನ್ನು ಸಾಮಾನ್ಯ ವರ್ಗದವರಿಗೆ ನೀಡಲಾಗುವುದು.

### 8. ಮನೆಯ ವಿನ್ಯಾಸ:

- ಭಾಗ್ಯ–425 ಚದರ ಅಡಿ (Single Bed Room)
- ಸಂಪದ–505 ಚದರ ಅಡಿ (Single Bed Room + Study Room)
- ಯಶಸ್ಸು–576 ಚದರ ಅಡಿ (Double Bed Room)